# <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ</u>

**ಸಿ.ಸಿ.ನಂ.** 223/2023

ಡಿ.ಡಬ್ಲ್ಯು ಃ-1

| | | |
|---|---|---|
| ಸಾಕ್ಷಿದಾರರ ಹೆಸರು | - | ಅಮುದ ಬಾಲಕೃಷ್ಣ ಸ್ವಾಮಿ |
| ಗಂಡನ ಹೆಸರು | - | ಬಾಲಕೃಷ್ಣ ಸ್ವಾಮಿ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ್ತವ್ಯ | - | ಕಾರವಾರ. |

(ಇಂದು ದಿನಾಂಕಃ **11-02-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ - ಆರೋಪಿಪರ ಶ್ರೀ ಬಿಡಿಎಸ್ ವಕೀಲರಿಂದ</u>**

ನಾನು ಕಾರವಾರದಲ್ಲಿ ಕಳೆದ 2 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತೇದೆನು. ನಾನು ಗೋಕರ್ಣದಲ್ಲಿ ಸುಮಾರು 19 ವರ್ಷಗಳಿಂದ ಇದ್ದೆನು. ನನ್ನ ವಿರುದ್ಧ ಫಿರ್ಯಾದುದರು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ನಾನು ಫಿರ್ಯಾದುದಾರರಿಂದ ಕೇವಲ 20 ಸಾವಿರಗಳನ್ನು ತೆಗೆದುಕೊಂಡಿದ್ದು, ಅವರು ನನ್ನ ವಿರುದ್ಧ ರೂ.1,50,000/-ಗೆ ಪ್ರಕರಣವನ್ನು ದಾಖಲಿಸಿರುತ್ತಾರೆ. ನಾನು ನನ್ನ ಚಿಕಿತ್ಸೆಯ ಕುರಿತಾಗಿ ಫಿರ್ಯಾದುದಾರರ ಬಳಿ ರೂ.20,000/ವನ್ನು ಕೇಳಿದ್ದು, ಅವರು ನನಗೆ ಅಷ್ಟು ಹಣ ಇಲ್ಲ ನನ್ನ ಬಳಿ ನಾನು ರೂ.15,000/- ಕೊಡುತ್ತೇನೆಂದು ಹೇಳಿರುತ್ತಾರೆ. ನಂತರ ನಾನು ನನ್ನ ಚಿಕಿತ್ಸೆ ಆದ ನಂತರ ಏಪ್ರಿಲ್ ತಿಂಗಳಿನಲ್ಲಿ ರೂ.5000/- ಪಡೆದುಕೊಂಡಿರುತ್ತೇನೆ. ನಾನು ಅವರಿಗೆ ಸ್ವಲ್ಪ ಸ್ವಲ್ಪ

ಹಣವನ್ನು ನೀಡುತ್ತೇನೆ ಎಂದು ಹೇಳಿದ್ದು ಅದರಂತೆ ಪ್ರತಿತಿಂಗಳು ಸ್ವಲ್ಪ ಸ್ವಲ್ಪ ಹಣವನ್ನು ಕೊಟ್ಟಿದ್ದು, ನಾನು ಅವರಿಂದ ಪಡೆದುಕೊಂಡ ರೂ.25,000/- ಹಣವನ್ನು ಸಂಪೂರ್ಣವಾಗಿ ನೀಡಿರುತ್ತೇನೆ. ನಾನು ಅವರ ಬಳಿ ಬಡ್ಡಿಗಾಗಿ ಹಣವನ್ನು ಪಡೆದುಕೊಂಡಿದ್ದು, ರೂ.20000/- ಅಸಲು ಹಾಗೂ ಅದಕ್ಕೆ ರೂ.5000/- ಬಡ್ಡಿಯಾಗಿ ಹಣವನ್ನು ವಾಪಸ್ಸು ನೀಡಿರುತ್ತೇನೆ.

ನನಗೆ ಅವರು ಗೂಗಲ್ ಪೇ ಮುಖಾಂತರ ಹಣವನ್ನು ಸಂದಾಯ ಮಾಡಿದ್ದು, ನಾನು ಕೂಡ ಅವರಿಗೆ ಗೂಗಲ್ ಪೇ ಮುಖಾಂತರ ಹಣವನ್ನು ವಾಪಸ್ಸು ನೀಡಿರುತ್ತೇನೆ. ನಾನು ಅವರಿಗೆ ಅವರಿಂದ ಹಣವನ್ನು ಪಡೆದುಕೊಳ್ಳುವ ಸಂಧರ್ಭದಲ್ಲಿ ಚೆಕ್ ನ್ನು ನೀಡಿದ್ದು, ಹಣ ಸಂಪೂರ್ಣ ಸಂದಾಯವಾದ ನಂತರ ಚೆಕ್ ನ್ನು ವಾಪಸ್ಸು ನೀಡುವಂತೆ ಕೇಳಿರುತ್ತೇನೆ. ಆಗ ಅವರು ನನ್ನ ಬಳಿ ಚೆಕ್ ನ್ನು ಕೊಡುತ್ತೀನಿ ಎಂದು ಹೇಳಿರುತ್ತಾರೆ. ನಾನು ಪದೇ ಪದೇ ಚೆಕ್ ನ್ನು ಕೇಳಿದರೂ ಅವರು ವಾಪಸ್ಸು ನೀಡಿದೆ ಇದ್ದು ನಂತರ ನನಗೆ ವಕೀಲರ ಮುಖಾಂತರ ಚೆಕ್ ಅಮಾನ್ಯವಾದ ಬಗ್ಗೆ ನೊಟಿಸನ್ನು ನೀಡಿರುತ್ತಾರೆ.

ಈ ಕುರಿತಾಗಿ ನಾನು ಅವರ ಬಳಿ ವಿಚಾರಿಸಿದಾಗ ಅವರು ನನಗೆ ನೀನು ಬಡ್ಡಿಯನ್ನು ನೀಡಲು ಬಾಕಿ ಇರುತ್ತದೆ ಈ ಕುರಿತಾಗಿ ನಾನು ಚೆಕ್ ನ್ನು ಹಾಕಿರುತ್ತೇನೆ ನೀನು ನನ್ನ ಬಳಿ ಏನು ಕೇಳಬೇಡ ನ್ಯಾಯಾಲಯಕ್ಕೆ ಬಾ ಎಂದು ಹೇಳಿರುತ್ತಾರೆ. ನಾನು ನಂತರ ನನ್ನ ವಕೀಲರಿಗೆ ಭೇಟಿಯಾಗಿ ಮಾಹಿತಿಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ